ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ ಇದಕ್ಕೆ ಸಂಬಂಧಪಟ್ಟ ಹಾಗೆ ಲಾ ಆಂಡ್ ಆರ್ಡರ್ ಬಗ್ಗೆ ಹಿಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಬೆಳಗಾಮ್ ಪರಿಸ್ಥಿತಿ ಈಗ ಚೆನ್ನಾಗಿ ಇದೆ. ಮತ್ತೆ ಮಾನ್ಯ ಸದಸ್ಯರುಗಳಂತವರು ಹೇಳಿರತಕ್ಕಂಥ ವಿಚಾರದ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟ ಏರ್ಪಾಡು ಮಾಡಿದ್ದೇನೆ.

೧೦. ಪದವಿ ಪೂರ್ವ ಶಿಕ್ಷಣ ಮಂಡಳಿಯನ್ನು ಒಂದು ಸ್ವಾಯತ್ತ ಮಂಡಳಿಯನ್ನಾಗಿ ಮಾಡುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್ — ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳು ಅಸ್ತಿತ್ವಕ್ಕೆ ಬಂದು ಸುಮಾರು ೧೪ ವರ್ಷಗಳೇ ಸಂದಿದ್ದರೂ ಇನ್ನೂ ಅವುಗಳ ವ್ಯವಸ್ಥೆ ಶೋಚನೀಯ ಸ್ಥಿತಿಯಲ್ಲಿರುವುದು ವಿದ್ಯಾರ್ಥಿಗಳು, ಅಧ್ಯಾಪಕರು, ವಿವಿಧ ಇಲಾಖೆಗಳಲ್ಲಿ ಹಂಚಿ ಹೋಗಿರುವುದು. ಇಂದಿನವರೆಗೂ ಪದವಿ ಪೂರ್ವ ಶಿಕ್ಷಣ ಮಂಡಳಿಯನ್ನು ಒಂದು ಸ್ವಾಯತ್ತ ಮಂಡಳಿಯನ್ನಾಗಿ ಮಾಡದೆ ವಿಳಂಬ ಮಾಡುತ್ತಿರುವುದು.

ಉಪನ್ಯಾಸಕರುಗಳಿಗೆ ಪದವಿ ಪೂರ್ವ ಕಾಲೇಜುಗಳಿಗೂ ಅನ್ವಯವಾಗುವಂತೆ ರೀಡರ್, ಪ್ರೊಫೆಸರ್ ಹುದ್ದೆಗಳನ್ನು ಸೃಷ್ಟಿಸಬೆ ತಾರತಮ್ಯ ಮಾಡಿರುವುದು ಭೋಧಕೇತರ ಸಿಬ್ಬಂದಿಯವರಿಗೂ ಪದವಿ ಕಾಲೇಜುಗಳಲ್ಲಿ ಇರುವಂತೆ ಬಡ್ತಿಯ ಅವಕಾಶ ಮಾಡಿ ಕೊಡದಿರುವುದು ಗ್ರಂಥಾಧಿಕಾರಿ, ದೈಹಿಕ ಶಿಕ್ಷಕರ ಹುದ್ದೆಗಳನ್ನು ಪದವಿ ಕಾಲೇಜುಗಳಲ್ಲಿ ಇರುವಂತೆ ಸೃಷ್ಟಿಸಿ ಭರ್ತಿ ಮಾಡದಿರುವುದು. ಮಂಂತಾದ ವಿಚಾರಗಳನ್ನು ಕುರಿತಂ ಪದವಿ ಪೂರ್ವ ಕಾಲೇಜಿನ ಭೋದಕರು ಮತ್ತು ಭೇಧಕೇತರ ಸಾವಿರಾರು ಸಿಬ್ಬಂಧಿಯವರು ಈ ದಿನ ಸಾವಿರಾರು ಜನರು ''ವಿಧಾನ ಸೌಧ ಚಲೋ'' ಜಾತಾ ಹೊರಡಿಸಿರುವುದರಿಂದ ಈ ವಿಷಯದಲ್ಲಿ ಸದನದ ಗಮನ ಸೆಳೆಯುತ್ತಾ ಸ್ಪಷ್ಟವಾದ ಉತ್ತರವನ್ನು ಸಂಬಂಧ ಪಟ್ಟ ಮಂತ್ರಿಗಳಪರಿಂದ ಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್ (ವಿದ್ಯಾ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮೊದಲು ಪಿ.ಯು.ಸಿ. ಬೋರ್ಡ್‌ನ್ನು ಆಟಾನಮಿ ಬೋರ್ಡನ್ನಾಗಿ ಮಾಡಬೇಕು. ಎಕ್ಸಿಕ್ಯುಟೀವ್ ಆರ್ಡರ್ ಮೇಲೆ ಪ್ರತ್ಯೇಕವಾಗಿ ಸ್ವಾಯತ್ತತೆಯಾಗಬೇಕಾಗಿದೆ. ಜೂನಿಯರ್ ಕಾಲೇಜುಗಳಲ್ಲಿ ಪ್ರೊಫೆಸರ್ಸ್ ಎಂದು ಏನು ಇದ್ದಾರೆ ಆ ಹುದ್ದೆಗಳನ್ನೂ ಕೂಡ ಕೊಡಬೇಕೆಂದು ಶಿಕ್ಷಕರ ಸಂಘದವರಂ ಬಂದು ಚರ್ಚೆ ಮಾಡಿದ್ದಾರೆ. ಈಗ ಪಿ.ಯು.ಸಿ ಬೋರ್ಡ್ ಸರ್ಕಾರದ ಆಜ್ಞೆಯ ಮೇಲೆ ನಡೆಯಂತ್ತಿದೆ. ಇದಕ್ಕೆ ಸ್ವಾಯತ್ತತೆ ಕೊಡಬೇಕಾದರೆ ಕಾಯಿದೆ ಮಾಡಬೇಕಾಗಿದೆ. ಪಕ್ಕದ ರಾಜ್ಯಗಳಲ್ಲಿನ ಪರಿಸ್ಥಿತಿ ಹೇಗೆ ಇದೆ ಎಂಬುದೆಲ್ಲವನ್ನು ಅಧ್ಯಾಯನಮಾಡಿ ಮಂಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಮಂತ್ತೆ ಜೂನಿಯರ್ ಕಾಲೇಜುಗಳಲ್ಲಿ ಪ್ರೊಫೇಸರುಗಳ ಹುದ್ದೆಗಳನ್ನು ಕೂಡ ಕೇಳುತ್ತಿದ್ದಾರೆ. ಇದು ಬೇಕೆ ಬೇಡವೆ ಎನ್ನುವ ಪ್ರಶ್ನೆಯನ್ನು ನೋಡಬೇಕಾಗಿದೆ. ಲೆಕ್ಚರರ್ಸ್ ರೀಡರ್ಸ್ ಬಗ್ಗೆಯೂ ಕೂಡ ಚರ್ಚೆ ಮಾಡಿದ್ದೇವೆ. ಸಾವಧಾನವಾಗಿ ಇದನ್ನೆಲ್ಲವನ್ನು ಕೇಳಿ ಕನ್‌ವಿನ್ಸ್ ಮಾಡಬೇಕಾಗಿದೆ. ವಿಧಾನ ಸೌಧ ಚಲೋ ಮಾಡತಕ್ಕಂಥದ್ದು ಕಾಮನ್ ಆಗಿಬಿಟ್ಟಿದೆ. ಮೊನ್ನೆ ಹತ್ತುಸಾವಿರಜನರು ಬಂದಿದ್ದರು. ಇವರೂ ಬರುತ್ತಿದ್ದಾರೆ, ಒಂದರೆ ಅವರಿಗೆ ಸೂಕ್ತ ಉತ್ತರವನ್ನು ಹೇಳಿ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ ತಾವು ಕರ್ನಾಟಕ ಸಹಕಾರಿ ಬಟ್ಟೆ ಗಿರಣಿ ಬಗ್ಗೆ ಮಾತನಾಡಿ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ ನಾನು ನಿಯಮ ೩೫೪ರ ಕೆಳಗೆ ನೋಟೀಸ್ ಕಳುಹಿಸಿಕೊಟ್ಟಿದ್ದೆ, ಆದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರಬಂದಿಲ್ಲ,

ಅಧ್ಯಕ್ಷರು.—ನೀವು ಕೇಳಿರತಕ್ಕಂಥ ವಿಷಯ ಮತ್ತು ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ರವರು ಕೇಳಿರತಕ್ಕಂಥ ವಿಷಯ ಎರಡೂ ಒಂದೇ ಆಗಿರುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ಅವರು ಕೇಳಿರತಕ್ಕಂಥ ವಿಷಯವೇ ಬೇರೆ ನಾನಂ ಕೇಳಿರುವ ವಿಷಯವೇ ಬೇರೆಯಾಗಿರುತ್ತದೆ. ತಾವು ಬೇಕಾದರೆ ಓದಿ ನೋಡಿ.